# ಪೇಳಲಳವೆ ನಿನ್ನ ಮಹಿಮೆಯ ಶ್ರೀರಂಗ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchha Rayara, page No. 52.
2. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 107.
3. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.

ರಾಗ: ಸಾರಂಗ ತಾಳ: ಆದಿ

ಪೇಳಲಳವೆ ನಿನ್ನ ಮಹಿಮೆಯ ಶ್ರೀರಂಗ ಧಾಮ
ಪೇಳಲಳವೆ ನಿನ್ನ ಮಹಿಮೆಯ ॥ ಪ ॥

ನೀಲಮೇಘಶ್ಯಾಮ ನಿನ್ನ
ಬಾಲ ಲೀಲೆಯಾಟವ ॥ ಅಪ ॥

ವಿಷದ ಮೊಲೆಯ ಪೂತನಿಯ
ಅಸುವ ಹೀರಿದ ಶೂರನಾದೆ
ಉಸಿರಲಳವೆ ನಿನ್ನ ಮಹಿಮೆ
ಅಮ್ಮಮ್ಮಮ್ಮಮ್ಮಮ್ಮಮ್ಮ
ಕೆಸರ ತಿನಬೇಡೆನುತ ತಾಯಿ
ಶಿಶುವಿನ ವದನವ ನೋಡಿದಳಾಗ
ದಶಚತುರ್ಭುವನವ ತೋರಿದ ಬಾಯೊಳ
ಗಲ್ಲಲ್ಲಲಲ್ಲಲ್ಲೇ ॥ 1 ॥

ಬಾಲಲೀಲೆಯಲ್ಲಿ ಬಂಡಿ
ಕಾಲಿಲೊದ್ದು ಶಕಟಾಸುರನ
ಮೂಲ ನಾಶ ಮಾಡಿದೆ ನೀ
ನಬ್ಬಬ್ಬಬ್ಬಬ್ಬಬ್ಬಬ್ಬ
ತಾಳಮರದ ನಡುವೆ ಒರಳ

ಕಾಲಿಗೆ ಕಟ್ಟೆಳೆಯುತಿರಲು
ಬಾಲ ಸತ್ತನೆಂದು ಗೋಪಿ ಅತ್ತ-
ಳಯ್ಯಯ್ಯಯ್ಯಯ್ಯಯ್ಯಯ್ಯೊ ॥ 2 ॥

ಸಣ್ಣವನಿವನಲ್ಲ ನಮ್ಮ
ಬೆಣ್ಣೆ ಕದ್ದು ಗೊಲ್ಲರ ಮನೆಯ
ಹೆಣ್ಣು ಮಕ್ಕಳನು ಹಿಡಿದ ಕಳ್ಳ
ಎಲ್ಲೆಲ್ಲೆಲ್ಲೆಲ್ಲೆಲ್ಲೆಲ್ಲೆ
ನಿನ್ನಾಣೆಯಿಲ್ಲೆಂಬ ರಂಗನ
ಬಿನ್ನಾಣಕೆ ನಕ್ಕವರನು ಬಯ್ಯುತ
ಎನ್ನ ಕಂದ ಹುಸಿಯನಾಡ
ನೆಂದೆಂದೆಂದೆಂದೆಂದೆಂದು ॥ 3 ॥

ನಾರಿಯರೆಲ್ಲ ಬತ್ತಲೆಯಾಗಿ
ನೀರಾಟವನಾಡುತಿರಲು
ಸೀರೆಗಳೊಯ್ದು ಮರವನೇರಿದ
ನತ್ತತ್ತತ್ತತ್ತತ್ತತ್ತ
ವಾರಿಜಮುಖಿಯರು ಲಜ್ಜೆಯ ದೊರೆದು
ಸೀರೆಗಳನು ಬೇಡಲವರ
ಮೋರೆ ನೋಡಿ ರಂಗ ನಕ್ಕ
ಅಬ್ಬಬ್ಬಬ್ಬಬ್ಬಬ್ಬಬ್ಬ ॥ 4 ॥

ಕಾಡು ಕಿಚ್ಚು ಮುಸುಕಿ ಗೋವ-
ವಾಡಿಯು ಬೆಂದದ್ದು ನೋಡಿ
ಈಡಿಲ್ಲದ ಉರಿಯ ತೀಡಿದ
ಅತ್ತತ್ತತ್ತತ್ತತ್ತತ್ತ
ಬೇಡಿದ ವರಗಳನೀವ
ಪುರಂದರ ವಿಠಲನ ಲೀಲೆಯ
ರೂಢಿಯೊಳೀತನ ಸಮರು ಯಾರು
ಇಲ್ಲಿಲ್ಲಿಲ್ಲಿಲ್ಲಿಲ್ಲಿಲ್ಲ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ದಾಸರು ಶ್ರೀ ಕೃಷ್ಣನ ಬಾಲ ಲೀಲೆಯ ಮಹಿಮೆಯನ್ನು ಮೆಚ್ಚಿ ಈ ಹಾಡಿನಲ್ಲಿ ಕೊಂಡಾಡಿದ್ದಾರೆ.

**ಗೋವಾಡಿ** = ಗೋಕುಲ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, Balakrishna, ranga, gopi, yashode, visha, putani, asura, tayi, koosu, bayi, mara, benne, kalla, hennu, makkalu, ANe, nage, nachike, kaadu, gokula, agni,
**Pravachana:** NA
**Explanation:** NA